# ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು

12ನೇ ಆಡಳಿತ ಮಂಡಳಿ ಸಭೆ

ದಿನಾಂಕ: 05.12.2011

ವೇಳೆ 2.45 ಗಂಟೆಗೆ

ಸ್ಥಳ

ವೈದ್ಯಕೀಯ ಶಿಕ್ಷಣ ಸಚಿವರ ಕೊಠಡಿ

ಕೊಠಡಿ ಸಂಖ್ಯೆ: 406, ವಿಕಾಸಸೌಧ, ಬೆಂಗಳೂರು.

1) ದಿನಾಂಕ 3.1.2011 ರಂದು ಜರುಗಿದ ರಿಮ್ಸ್ ಸಂಸ್ಥೆಯ 11ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಯನ್ನು ಓದಿ ದಾಖಲಿಸುವುದು ಮತ್ತು ಅನುಪಾಲನಾ ವರದಿಯನ್ನು ಅನುಮೋದಿಸುವುದು.

ನಿರ್ಣಯ: ಅನುಮೋದಿಸಲಾಯಿತು.

2) ದಿನಾಂಕ 30.7.2011 ರಂದು ನೇರ ಸಂದರ್ಶನದ ಮೂಲಕ ಭರ್ತಿ ಮಾಡಿದ ಬೋಧಕ ಸಿಬ್ಬಂದಿ ಹುದ್ದೆಗಳ ನೇಮಕಾತಿ ಕುರಿತು ಜರುಗಿದ ಸಭಾ ನಡವಳಿಗಳನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

3) ದಿನಾಂಕ 11.11.2011 ರಂದು ನೇರ ಸಂದರ್ಶನದ ಮೂಲಕ ಭರ್ತಿ ಮಾಡಿದ ಬೋಧಕ ಸಿಬ್ಬಂದಿ ಹುದ್ದೆಗಳ ನೇಮಕಾತಿ ಕುರಿತು ಜರುಗಿಸಿದ ಸಭಾ ನಡವಳಿಗಳನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

4) ರಿಮ್ಸ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ರಿವ್ಯೂ ಸಮಿತಿ ಮೂಲಕ ಪದೋನ್ನತಿ ನೀಡಿರುವ ಕುರಿತು ಅನುಮೋದನೆ ನೀಡುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

5) ಭಾರತೀಯ ವೈದ್ಯಕೀಯ ಪರಿಷತ್ ಅನುಮತಿಗೆ ಅವಶ್ಯವಿರುವ ಬೋಧಕ ಸಿಬ್ಬಂದಿಯನ್ನು ನೇರ ನೇಮಕಾತಿ ಹಾಗೂ ಆಹ್ವಾನದ ಮೂಲಕ ನೇಮಕಾತಿಯನ್ನು ಆಡಳಿತ ಮಂಡಳಿ ಅನುಮೋದನೆಯಂತೆ ಮಾಡಿದ್ದು, ನೇಮಕಾತಿ ಮಾಡಿರುವ ಕುರಿತು ಅನುಮೋದನೆ ನೀಡುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

6) ದಿನಾಂಕ 3.11.2010 ರಂದು ನಡೆದ ರಿಮ್ಸ್ ಸಂಸ್ಥೆಯ 5ನೇ ಆರ್ಥಿಕ ಸಭೆಯ ಸಭಾ ನಡವಳಿಯನ್ನು ಅನುಮೋದಿಸುವುದು.

ನಿರ್ಣಯ: ಅನುಮೋದಿಸಲಾಯಿತು

(ಎಸ್.ವಿ. ರಾಮದಾಸ್)
ವೈದ್ಯಕೀಯ ಶಿಕ್ಷಣ ಸಚಿವರು

[illegible]

7) ದಿನಾಂಕ: 5.7.2011ರಂದು ನಡೆದ ರಿಮ್ಸ್ ಸಂಸ್ಥೆಯ 6ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಯನ್ನು ಅನುಮೋದಿಸುವುದು.

ನಿರ್ಣಯ : ಅನುಮೋದಿಸಲಾಯಿತು.

8) ಭಾರತೀಯ ವೈದ್ಯಕೀಯ ಪರಿಷತ್ ಅನುಮೋದನೆಗೆ ಅವಶ್ಯವಿರುವ ವಿವಿಧ ಬೋಧಕೇತರ ಸಿಬ್ಬಂದಿಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿ ಅರ್ಹತೆ ಮತ್ತು ಮೀಸಲಾತಿ ಅನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಿದ್ದು, ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಫಲಿತಾಂಶ ಪಟ್ಟಿಯನ್ನು ಪ್ರಕಟಿಸಲು ಹಾಗೂ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಅನುಮತಿ ನೀಡುವ ಬಗ್ಗೆ.

ನಿರ್ಣಯ : ಅನುಮೋದಿಸಲಾಯಿತು.

9) ರಿಮ್ಸ್ ಸಂಸ್ಥೆಯ ಆವರಣದಲ್ಲಿ ಹಾಪ್‌ಕಾಮ್ಸ್ ಮಳಿಗೆಯನ್ನು ಸ್ಥಾಪಿಸಲು ಅನುಮತಿ ನೀಡುವ ಬಗ್ಗೆ.

ನಿರ್ಣಯ : ಅನುಮೋದಿಸಲಾಯಿತು.

10) ಆಂಬ್ಯುಲೆನ್ಸ್ ವಾಹನ ಚಾಲನೆಗಾಗಿ ಹಾಗೂ ಇತರೆ ತುರ್ತು ಕಾರ್ಯಕ್ಕಾಗಿ 6 ವಾಹನ ಚಾಲಕರನ್ನು ನೇಮಿಸಿ, ಹುದ್ದೆಯ ಮೂಲವೇತನಕ್ಕೆ ರೂ.100/- ಗಳನ್ನು ಕಡಿಮೆ ಮಾಡಿ ವೇತನ ನೀಡುವ ಬಗ್ಗೆ.

ನಿರ್ಣಯ : ಅನುಮೋದಿಸಲಾಯಿತು.

11) ಈ ಸಂಸ್ಥೆಯ ಉತ್ತಮ ಪ್ರಗತಿಗಾಗಿ ಸಂಪನ್ಮೂಲ ನಿರ್ವಹಣಾ ಪದ್ಧತಿ ತಂತ್ರಾಂಶವನ್ನು (Campus Resources Management System Software) ಅಳವಡಿಸಲು ಕೆ.ಟಿ.ಪಿ.ಪಿ. ಕಾಯ್ದೆ, 1999 ಮತ್ತು ನಿಯಮ.2000ರನ್ವಯ ಕೈಗೊಂಡ ಕ್ರಮ ಬಗ್ಗೆ ಘಟನೋತ್ತರ ಮಂಜೂರಾತಿ ನೀಡುವ ಕುರಿತು.

ನಿರ್ಣಯ : ಅನುಮೋದಿಸಲಾಯಿತು.

(ಎಸ್ ಎ. ರಾಮದಾಸ್)
ವೈದ್ಯಕೀಯ ಶಿಕ್ಷಣ ಸಚಿವರು

2) ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರೆ ವಿಷಯಗಳು.

ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯು (ರಿಮ್ಸ್) ಇತ್ತೀಚೆಗೆ ಆರಂಭವಾಗಿದ್ದು, ಅದಕ್ಕೆ ಒಬ್ಬ ನುರಿತ ವೈದ್ಯಕೀಯ ಅಧೀಕ್ಷಕರ ಅವಶ್ಯಕತೆಯನ್ನು ಅರಿತ ಮಾನ್ಯ ಸಚಿವರು ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಪ್ರಭಾರ ವೈದ್ಯಕೀಯ ಅಧೀಕ್ಷಕರಾಗಿ ಕೆಲಸ ಮಾಡುತ್ತಿರುವ ಡಾ: ಶಿವಾನಂದ ದೊಡ್ಡಮನಿಯವರನ್ನು ರಿಮ್ಸ್‌ಗೆ ವರ್ಗಾಯಿಸಿ ಅಲ್ಲಿ ಪ್ರಭಾರ ವೈದ್ಯಕೀಯ ಅಧೀಕ್ಷಕರಾಗಿ ನೇಮಿಸಲು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಟಿಪ್ಪಣಿ ನೀಡಲಾಗಿ, ಸರ್ಕಾರವು ದಿನಾಂಕ 14.10.2011 ರಂದು ಹೊರಡಿಸಿದ ಆದೇಶ ಸಂಖ್ಯೆ: ಆಕುಕ 194 ಆರ್.ಜಿ.ಯು 2011 ರ ಪ್ರಕಾರ ಡಾ: ಶಿವಾನಂದ ದೊಡ್ಡಮನಿಯವರನ್ನು ತಕ್ಷಣ ಜಾರಿಗೆ ಬರುವಂತೆ ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರಭಾರ ವೈದ್ಯಕೀಯ ಅಧೀಕ್ಷಕರ ಹುದ್ದೆಯಲ್ಲಿಟ್ಟು ಅನ್ಯಪರ ಸೇವೆಯ ಮೇಲೆ ನಿಯೋಜಿಸಲಾಯಿತು. ಈ ಸರ್ಕಾರಿ ಆಜ್ಞೆಯಂತೆ ಡಾ: ಶಿವಾನಂದ ದೊಡ್ಡಮನಿಯವರನ್ನು ದಿ: 21.10.2011 ರ ಅಪರಾಹ್ನ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದ್ದು, ಸದರಿಯವರು ದಿನಾಂಕ: 31.10.2011 ರಂದು ಪ್ರಭಾರ ವೈದ್ಯಕೀಯ ಅಧೀಕ್ಷಕರು ಹುದ್ದೆಗೆ ವರದಿ ಮಾಡಿಕೊಂಡಿರುತ್ತಾರೆ ಹಾಗೂ ಡಾ: ಮಂಡೋಲ್ಕರ್, ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ ಇವರನ್ನು ಡೆಪ್ಯುಟಿ ವೈದ್ಯಕೀಯ ಅಧೀಕ್ಷಕರನ್ನಾಗಿ ಕಾರ್ಯನಿರ್ವಹಿಸಲು ನೇಮಿಸುವ ಬಗ್ಗೆ. ಸದರಿ ವಿಷಯವನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

ನಿರ್ಣಯ: ಆಡಳಿತ ಮಂಡಳಿಯು ಈ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಮೋದಿಸಿದೆ.

ಅಧ್ಯಕ್ಷರು, ರಿಮ್ಸ್ ಆಡಳಿತ ಮಂಡಳಿ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಉಪಾಧ್ಯಕ್ಷರು,
ರಿಮ್ಸ್ ಆಡಳಿತ ಮಂಡಳಿ